

ಹಾಕಿದ. ಜಬರಾ ಬೊಗಳುತ್ತಾ ಇತ್ತು. ಅವನ ಹತ್ತಿರಕ್ಕೆ ಬರಲಿಲ್ಲ.

ಮತ್ತೆ ಮೇಯುತ್ತಾ ಇರುವ ಶಬ್ದ ಕೇಳಿಸಿತು. ಈಗ ತನಗೆ ತಾನೇ ಮೋಸ ಮಾಡಿಕೊಳ್ಳಲಾಗಲಿಲ್ಲ. ತನ್ನ ಜಾಗದಿಂದ ಕದಲುವುದೆಂದರೆ ವಿಷದಂತೆ ಎಂದು ಅನಿಸತೊಡಗಿತು. ಹೇಗೆ ಬೆಚ್ಚಗೆ ಮಾಡಿಕೊಂಡು ಕೂತಿದ್ದ. ಈ ಚಳಿಯಲ್ಲಿ ಹೊಲಕ್ಕೆ ಹೋಗೋದು, ಪ್ರಾಣಿಗಳ ಹಿಂದೆ ಓಡುವುದು ತಪ್ಪು ಎಂದು ಅರಿವಾಯಿತು. ತನ್ನ ಜಾಗದಿಂದ ಅವನು ಅಲ್ಲಾಡಲಿಲ್ಲ.

ಜೋರಾಗಿ ಒಂದು ಕೂಗು ಹಾಕಿದ. 'ಹೇ ಹೇ ಹೋಗಾಚೆ ಛೂಛೂ'

ಜಬರಾ ಮತ್ತೆ ಬೊಗಳಿತು. ಪ್ರಾಣಿಗಳು ಹೊಲದಲ್ಲಿ ಮೇಯುತ್ತಿದ್ದವು. ಬೆಳೆ ಬಂದಿತ್ತು. ಬೇಸಾಯ ಅದೆಷ್ಟೊಂದು ಚೆನ್ನಾಗಿ ಮಾಡಿದ್ದೆ. ಆದರೆ, ಈ ಹಾಳಾದ್ದು ದುಷ್ಟ ಮೃಗಗಳು ಅದನ್ನು ಸರ್ವನಾಶ ಮಾಡ್ತಾ ಇವೆ.

ಹಲ್ಕೂ ಮನಸ್ಸಿನಲ್ಲಿ ಪಕ್ಕಾ ನಿರ್ಧಾರ ಮಾಡಿಕೊಂಡು ಮೇಲೆದ್ದು ಮೂರು ನಾಲಕ್ಕು ಹೆಜ್ಜೆ ಹಾಕಿದ. ಒಮ್ಮೆಲೇ ಚೇಳು ಕಡಿದ ಹಾಗೆ ಭಯಂಕರವಾಗಿ ಚುಚ್ಚುವ ಚಳಿಗಾಳಿಯ ಹೊಡೆತ ಬಂದು ಅಪ್ಪಳಿಸಿತು. ಮತ್ತೆ ಆರುತ್ತಿದ್ದ ಅಗ್ನಿಕುಂಡದ ಸಮೀಪಕ್ಕೆ ಹೋಗಿ ಕುಳಿತ. ಬೆಂಕಿಯನ್ನು ಕೆದರಿ ತನ್ನ ಕೊರೆಯುವ ಶರೀರವನ್ನು ಬೆಚ್ಚಗಾಗಿಸಿಕೊಳ್ಳತೊಡಗಿದ.

ಜಬರಾ ತನ್ನ ಗಂಟಲು ಹರಿದುಕೊಳ್ಳುತ್ತಿತ್ತು. ನೀಲಗಾಯ್‌ಗಳು ಹೊಲವನ್ನೆಲ್ಲಾ ಮೇದು ಚೊಕ್ಕಟ ಮಾಡುತ್ತಿದ್ದವು. ಆದರೆ, ಹಲ್ಕೂ ಬಿಸಿ ಬೂದಿಯ ಬಳಿ ಶಾಂತವಾಗಿ ಕುಳಿತಿದ್ದ. ಆಲಸ್ಯ ಅವನನ್ನು ಹಗ್ಗಗಳ ಹಾಗೆ ಎಲ್ಲ ಕಡೆಯಿಂದ ಕಟ್ಟಿಹಾಕಿತ್ತು.

ಅದೇ ಬೂದಿಯ ಹತ್ತಿರ ಬೆಚ್ಚನೆಯ ನೆಲದ ಮೇಲೆ ಚಾದರವನ್ನು ಹೊದ್ದುಕೊಂಡು ನಿದ್ರಿಸಿಬಿಟ್ಟ.

ಬೆಳಿಗ್ಗೆ ನಿದ್ರೆಯಿಂದ ಎಚ್ಚೆತ್ತಾಗ ಎಲ್ಲೆಡೆ ಬಿಸಿಲು ಹರಡಿತ್ತು. ಅಲ್ಲೇ ನಿಂತಿದ್ದ ಮುನ್ನಿ ಹೇಳುತ್ತಾ ಇದ್ದಳು: 'ಇವತ್ತೆಲ್ಲ ಮಲಗೇ ಇರುತ್ತೀಯೇನು? ಇಲ್ಲಿ ಬಂದು ನೀನು ಸುಖ ಪಡ್ತಾ ಬಿದ್ದುಕೊಂಡೆ. ಅಲ್ಲಿ ಹೊಲ ಪೂರ್ತಿ ನಾಶವಾಗಿ ಹೋಯ್ತು.'

ಹಲ್ಕೂ ಮೇಲೆದ್ದು ಹೇಳಿದ: 'ನೀನೇನು ಹೊಲದ ಕಡೆಯಿಂದ ಬರುತ್ತಿದ್ದೀಯೇನು?'

ಮುನ್ನಿ ಹೇಳಿದಳು, 'ಹೌದು. ಇಡೀ ಹೊಲ ಹಾಳಾಗಿ ಹೋಯ್ತು. ಹೀಗೂ ಯಾರಾದರೂ ನಿದ್ದೆಮಾಡೋದುಂಟೇನು? ನೀನು ಮಂಚಿಕೆ ಹಾಕಿಕೊಂಡದ್ದರಿಂದೇನಾಯ್ತು?'

'ನಾನು ಸತ್ತು ಸತ್ತು ಬದುಕಿದ್ದೀನಿ. ನಿನಗೆ ನೋಡಿದರೆ ಹೊಲದ ಚಿಂತೆ. ಹೊಟ್ಟೇಲಿ ಅದೆಷ್ಟು ನೋವಾಯಿತು ಅನ್ನೋದು ನನಗೆ ಮಾತ್ರ ಗೊತ್ತು.'

ಇಬ್ಬರೂ ಮತ್ತೆ ಹೊಲದ ಬದುವಿಗೆ ಬಂದರು. ನೋಡಿದರೆ ಪ್ರಾಣಿಗಳು ಇಡೀ ಹೊಲಾನೆಲ್ಲಾ ತುಳಿದುಹಾಕಿವೆ. ಜಬರಾ ಶರೀರದಲ್ಲಿ ಪ್ರಾಣವೇ ಇಲ್ಲವೇನೋ ಎನ್ನುವ ಹಾಗೆ ಹೊಲದ ಗಡಿಯ ಹತ್ತಿರ ಕೆಳಗಡೆ ಅಂಗಾತನಾಗಿ ಮಲಗಿದೆ.

ಇಬ್ಬರೂ ಹೊಲದ ಸ್ಥಿತಿಯನ್ನು ನೋಡುತ್ತಿದ್ದರು. ಮುನ್ನಿಯ ಮುಖದ ಮೇಲೆ ನಿರಾಶೆ ಕವಿದಿತ್ತು. ಆದರೆ, ಹಲ್ಕೂ ಖುಷಿಯಾಗಿದ್ದ.

ಮುನ್ನಿ ಚಿಂತಿತಳಾಗಿ ಹೇಳಿದಳು 'ಈಗಿನ್ನೇನು ಕೂಲಿಮಾಡಿ ಹೊಟ್ಟೆ ತುಂಬಿಸಿಕೊಳ್ಳಬೇಕು.' ಹಲ್ಕೂ ಪ್ರಸನ್ನ ವದನನಾಗಿ ಹೇಳಿದ, 'ರಾತ್ರಿ ಥಂಡಿಯಲ್ಲಿ ಇನ್ನುಮೇಲೆ ಇಲ್ಲಿ ಮಲಗಬೇಕಾಗಿಲ್ಲ.'

●